# <u>ಕರ್ನಾಟಕ ಲೋಕಾಯುಕ್ತ</u>

**ಕಂಪ್ಲೇಟ್/ಉಪಲೋಕ್/ಜಿಎಲ್‌ಬಿ/1259/2021**
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 24-01-2022.

## <u>ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ</u>

**ವಿಷಯ: ಶ್ರೀ.ಲಾಲಪ್ಪ, ಪ್ರಥಮ ದರ್ಜೆ ಸಹಾಯಕರು, ಪತ್ರಾಂಕಿತ ಉಪ ಖಜಾನೆ, ಸೇಡಂ, ಕಲಬುರ್ಗಿ ಜಿಲ್ಲೆ** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

=====

1. ಪೋಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ಕಲಬುರ್ಗಿ ಪೋಲೀಸ್ ಠಾಣೆ, ಕಲಬುರ್ಗಿ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ, ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸಲ್ಲಿಸಿದ ವರದಿಯಲ್ಲಿ **ಶ್ರೀ.ಲಾಲಪ್ಪ, ಪ್ರಥಮ ದರ್ಜೆ ಸಹಾಯಕರು, ಪತ್ರಾಂಕಿತ ಉಪ ಖಜಾನೆ, ಸೇಡಂ, ಕಲಬುರ್ಗಿ ಜಿಲ್ಲೆ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ವಿನಯಕುಮಾರ, ಬಿನ್ ದಿ: ವಿಜಯಕುಮಾರ** ಸಿಂಪಿ, **ದ್ವಿ.ದ.ಸ. ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡ್ಲಾ ಮತ್ತು ಕುರುಕುಂಟ ಗ್ರಾಮ (ನಿಯೋಜನೆ ಮೇಲೆ) ಅರಸೂರು, ಕಲಬುರ್ಗಿ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ, ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **<u>ದೂರಿನ ಸಂಕ್ಷಿಪ್ತ ಮಾಹಿತಿ</u> :-**

i) ದೂರುದಾರರು, ಕೊಡ್ಲಾ ಮತ್ತು ಕುರುಕುಂಟ, ಪ್ರಾಥಮಿಕ ಆರೋಗ್ಯ ಕೇಂದ್ರದ, ಮಾರ್ಚ್ 2017 ರಿಂದ ಫೆಬ್ರವರಿ 2018 ವರೆಗಿನ ಲೇಖನ ಸಾಮಾಗ್ರಿ ಬಿಲ್ಲು, ಮತ್ತು ಜನವರಿ 2017 ರಿಂದ ಡಿಸೆಂಬರ್ 2017 ವರೆಗೆ ಪ್ರಯಾಣ ಭತ್ಯ ಬಿಲ್ಲು ಮತ್ತು ವೇತನ ಬಿಲ್ಲು ಹಾಗೂ ಪ್ರಥಮ ವೇತನ ಬಿಲ್ಲುಗಳನ್ನು ಹೆಚ್.ಆರ್.ಎಂ.ಎಸ್ ನಲ್ಲಿ ತಯಾರಿಸಿ ಪಾಸು ಮಾಡಲು ಫೆಬ್ರವರಿ 2018ರಲ್ಲಿ

ಎದುರುದಾರರಾದ ಕಚೇರಿಗೆ ಸಲ್ಲಿಸಿರುತ್ತಾರೆ. ಎದುರುದಾರರು, ದೂರುದಾರರು ಸಲ್ಲಿಸಿದ ಎಲ್ಲಾ ಬಿಲ್ಲುಗಳನ್ನು ಪಾಸ್ ಮಾಡಲು 40,000/- ರೂಪಾಯಿಗಳ ಲಂಚದ ಹಣವನ್ನು ಕೊಡಬೇಕೆಂದು ದೂರುದಾರರನ್ನು ಒತ್ತಾಯಿಸಿ 28,000/- ರೂ.ಗಳನ್ನು ಪಡೆದು ಬಿಲ್ ಪಾಸ್ ಮಾಡಿರುತ್ತಾರೆ. ಮಾನ್ಯ ಕರ್ನಾಟಕ ಸರ್ಕಾರದ ನಿರ್ದೇಶನದ ಪ್ರಕಾರ, ಅಧಿಕಾರಿ ಮತ್ತು ಸಿಬಂದಿಯವರ ಸಂಬಳ, ಪ್ರಯಾಣ ಭತ್ಯೆ ಬಿಲ್ಲು, ಡಿಸಿ ಬಿಲ್ಲುಗಳನ್ನು, ಕೆ-2 (ಖಜಾನೆ-2) ರಲ್ಲಿ ಮಾಡಬೇಕಾಗಿದ್ದರಿಂದ, ಎದುರುದಾರರು ಕೆ-2 ನೊಂದಣಿಯನ್ನು ಉಪಖಜಾನೆಯಲ್ಲಿ ಮಾಡಲು ದೂರುದಾರರು ಕೊಡಬೇಕಾಗಿದ್ದ ಉಳಿದ ಲಂಚದ ಹಣ 12,000/- ರೂಪಾಯಿ ನೀಡಿದರೆ ನೋಂದಣಿ ಮಾಡಿಕೊಡುತ್ತೇನೆಂದು, ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದಿನಾಂಕ: 15-05-2018 ರಂದು ದೂರುದಾರರು, ತಮ್ಮ ಗೆಳೆಯ ಮಲ್ಲಿನಾಥ ಇವರ ಮೊಬೈಲ್ ನಂ: 8088009696 ಮೂಲಕ ಎದುರುದಾರರ ಮೊಬೈಲ್ ನಂ: 9449064981 ಗೆ ಕರೆ ಮಾಡಿ ಮಾತನಾಡಿದಾಗ, ಎದುರುದಾರರು ಮೊಬೈಲ್‌ನಲ್ಲಿ ಏನು ಮಾತನಾಡಬೇಡ, ಎದುರು ಬಂದು ಮಾತನಾಡು ಎಂದು ಹೇಳಿರುತ್ತಾರೆ. ಸದರಿ ಸಂಭಾಷಣೆ ರೆಕಾರ್ಡ್ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿರುತ್ತದೆ. ದೂರುದಾರರು ದಿನಾಂಕ: 01-06-2018 ರಂದು ತಮ್ಮ ಮೊಬೈಲ್ ನಂ: 9901667340 ನಿಂದ, ಎದುರುದಾರರ ಮೊಬೈಲ್ ನಂ: 9449064981 ಗೆ ಕರೆ ಮಾಡಿ ಮಾತನಾಡಲಾಗಿ, ಎದುರುದಾರರು ತಾನು ಪೇಪರ್‌ನಲ್ಲಿ ಬರೆದಷ್ಟು ಹಣ 11,000/- ರೂಗಳನ್ನು ತೆಗೆದುಕೊಂಡು ಬಾ ಎಂದು ಮಾತನಾಡಿದ್ದು, ಸದರಿ ಸಂಭಾಷಣೆ ದೂರುದಾರರ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿರುತ್ತದೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ, ದಿನಾಂಕ: 02-06-2018 ರಂದು ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ, ಕಲಬುರ್ಗಿ, ಇವರಿಗೆ ದೂರನ್ನು ಮತ್ತು ಸಂಭಾಷಣೆ ಇರುವ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಅದರಂತೆ, ಸದರಿ ಮೊ.ಸಂ: 07/2018 ರಂತೆ, ಭ್ರಷ್ಟಾಚಾರ ಕಾಯಿದೆ 1988, ಕಲಂ 7 ರನ್ವಯ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

ii). ನಂತರ ತನಿಖಾಧಿಕಾರಿಯವರು, ಪಂಚರಾದ ಶ್ರೀ ಶಶಿಕಾಂತ ಪಂಚ-1, ಶ್ರೀ ಪ್ರಕಾಶ ಪಂಚ-2 ಇವರನ್ನು ಬರಮಾಡಿಕೊಂಡು, ಇವರುಗಳನ್ನು ದೂರುದಾರರಿಗೆ ಪರಿಚಯಿಸಿಕೊಟ್ಟು, ದೂರಿನ ವಿಚಾರವನ್ನು ತಿಳಿಸಿಕೊಟ್ಟಿರುತ್ತಾರೆ. ನಂತರ ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ 11,000/- ರೂ. ಲಂಚದ ಹಣವನ್ನು (500 x 2, 2000 x 5) ಹಾಜರುಪಡಿಸಿದ್ದು, ಸದರಿ ಹಣವನ್ನು ಪಂಚ-1 ರವರು ಪರಿಶೀಲಿಸಿ, ಅದರ ಮೌಲ್ಯ ಮತ್ತು ನಂಬರುಗಳನ್ನು ಹೇಳಿದ್ದು, ಅದನ್ನು ಪಂಚ-2 ರವರು ಬಿಳಿ ಹಾಳೆಯಲ್ಲಿ ಬರೆದುಕೊಟ್ಟಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ, ಪಂಚ-1 ರವರು ಪೊಲೀಸ್ ಸಿಬ್ಬಂದಿಯಿಂದ ಫಿನಾಫ್ತಲೀನ್ ಪೌಡರ್ ಲೇಪಿಸಿದ ಹಣವನ್ನು ಎರಡೂ ಕೈಗಳಿಂದ ಎಣಿಸಿ, ದೂರುದಾರರ ಶರ್ಟಿನ ಎಡಗಡೆ ಎದೆಯ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ, ತನಿಖಾಧಿಕಾರಿಯು ದೂರುದಾರರಿಗೆ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದ ನಂತರ, ದೂರುದಾರರು ತನ್ನ ತಲೆಯ ಮೇಲೆ

ಕೈಯಾಡಿಸುವ ಮೂಲಕ ಸಂಜ್ಞೆ ನೀಡಬೇಕೆಂದು ಹಾಗೂ ದೂರುದಾರರ ಜೊತೆ ಪಂಚ-2 ಇದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ದಿ: 2/06/2018 ರಂದು ಹಣ ವಹಿಸುವ ಪಂಚನಾಮೆಯನ್ನು 12.00 ಪಿಎಂ 3.00 ಪಿಎಂ ವರೆಗೆ ಪಂಚರ ಸಮಕ್ಷಮ ಮಾಡಿರುತ್ತಾರೆ.

iii). ಅದೇ ದಿನ ತನಿಖಾಧಿಕಾರಿಯು ದೂರುದಾರರನ್ನು, ಪಂಚರನ್ನು ಹಾಗೂ ಸಿಬ್ಬಂದಿಯನ್ನು ಕರೆದುಕೊಂಡು ಸುಮಾರು 4.25ರ ಪಿಎಂ ವೇಳೆಗೆ ದೂರುದಾರರು ಕೆಲಸ ನಿರ್ವಹಿಸುವ ಕಛೇರಿ, ಪತ್ರಾಂಕಿತ ಉಪಖಜಾನೆ ಹತ್ತಿರ ಬಂದಿದ್ದು, ಮತ್ತೊಮ್ಮೆ ದೂರುದಾರರಿಗೆ ಹಾಗೂ ಪಂಚ-2 ರವರಿಗೆ ಸೂಚನೆಯನ್ನು ನೀಡಿ ಕಳುಹಿಸಿರುತ್ತಾರೆ. ನಂತರ, ದೂರುದಾರರು ಪಂಚ-2 ರವರ ಜೊತೆ ಎದುರುದಾರರ ಕಛೇರಿಗೆ ಹೋಗಿ, ಅವರನ್ನು ಭೇಟಿ ಮಾಡಿ, ದೂರುದಾರರು ಎದುರುದಾರರನ್ನು ತನ್ನ ಕೆಲಸವನ್ನು ಬೇಗ ಮಾಡಲು ಹೇಳಿದಾಗ, ಎದುರುದಾರರು ಉಳಿದ ಬ್ಯಾಲೆನ್ಸ್ 11,000/- ರೂ. ಕೊಡು ಜಲ್ದಿ ಕೆಲಸ ಮಾಡಿಕೊಡುತ್ತೇನೆ ಎಂದು ಹೇಳಿದಾಗ, ದೂರುದಾರರು ತನ್ನ ಬಳಿ ಇದ್ದ, ಪಿನಾಫ್ತಲಿನ್ ಲೇಪಿತ ಲಂಚದ ಹಣ 11,000/- ರೂ. ಗಳನ್ನು ಎದುರುದಾರರಿಗೆ ಕೊಟ್ಟಾಗ, ಅವರು ಅದನ್ನು ಎಡಗೈಯಿಂದ ಪಡೆದು, ಎರಡೂ ಕೈಗಳಿಂದ ಎಣಿಸಿ, ತಾನು ಕುಳಿತ್ತಿದ್ದ ಟೇಬಲ್ಲಿನ ಬಲಗಡೆ ಇರುವ ಡ್ರಾನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಕೊಟ್ಟಾಗ, ತನಿಖಾಧಿಕಾರಿಯು ಸೂಚನೆಯನ್ನು ಅನುಸರಿಸಿ ಸ್ಥಳಕೆ ಬಂದು, ದೂರುದಾರರನ್ನು ವಿಚಾರಿಸಿದಾಗ, ದೂರುದಾರರು ತನ್ನಿಂದ ಲಂಚ ಪಡೆದ ಎದುರುದಾರರನ್ನು ತೋರಿಸಿಕೊಟ್ಟ ಮೇರೆಗೆ, ತನಿಖಾಧಿಕಾರಿ ಎದುರುದಾರರಿಗೆ ತನ್ನನ್ನು ಪರಿಚಯಿಸಿಕೊಂಡು ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ವಿಚಾರಣೆ ಪ್ರಾರಂಭಿಸಿರುತ್ತಾರೆ. ನಂತರ, ತನಿಖಾಧಿಕಾರಿಯ ಸೂಚನೆಯ ಮೇರೆಗೆ ಸಿಬ್ಬಂದಿಯವರು ಎದುರುದಾರರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ಪ್ರತ್ಯೇಕವಾಗಿ ತೊಳೆದಾಗ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ, ತನಿಖಾಧಿಕಾರಿಯ ಸೂಚನೆಯ ಮೇರೆಗೆ, ಎದುರುದಾರರು ಲಂಚದ ಹಣವನ್ನು ಟೇಬಲ್ ಡ್ರಾದಿಂದ ತೆಗೆದುಕೊಂಡು ಟೇಬಲ್ ಮೇಲೆ ಇಟ್ಟಾಗ, ಪಂಚರು ಸದರಿ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಶೀಲಿಸಿ ವಹಿಸುವಿಕೆ ಪಂಚನಾಮೆ ವೇಳೆಯಲ್ಲಿ ಬರೆದ ಪಟ್ಟಿಗೆ ತಾಳೆ ಮಾಡಿ, ಖಾತ್ರಿ ಪಡಿಸಿಕೊಂಡ ನಂತರ, ತನಿಖಾಧಿಕಾರಿ ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆ ಮೇರೆಗೆ, ಸಿಬ್ಬಂದಿ ಸ್ವಲ್ಪ ಹತ್ತಿಯ ತುಂಡನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ , ಎದುರುದಾರರು ಲಂಚದ ಹಣ ಇಟ್ಟಿದ್ದ ಹಾಳೆಯ ಮೇಲೆ ಒರೆಸಿದಾಗ, ಸದರಿ ಹತ್ತಿಯ ತುಂಡನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಯು ಎದುರುದಾರರನ್ನು ಕುರಿತು ಲಂಚದ ಹಣ ಪಡೆದ ಬಗ್ಗೆ ಸ್ವ-ರಕ್ಷಣಾತ್ಮಕ ಹೇಳಿಕೆ ಕೊಡುವಂತೆ ಹೇಳಿದಾಗ, ಎದುರುದಾರರು ತನ್ನ ಹೇಳಿಕೆಯನ್ನು **"ನಾನು ಲಾಲಪ್ಪ ತಂದೆ ಬಕ್ಕಪ್ಪಾ ಗಡದೂರ ಸಾ: ಚಿಂತಲಗೇರಾ ವಯಸ್ಸು 36 ಉದ್ಯೋಗ ಎಫ್.ಡಿ.ಸಿ ಸೇಡಂ ಕಾಸ್ಟ್ ಎಸ್.ಟಿ**

ರಾಜಗೊಂಡ ಸಾ: ಚಿಂತಲಗೇರಾ ತಾ: ಬೀದರ ಜಿ: ಬೀದರ ಹಾಲಿ ವಸತಿ ರಾಮರೆಡ್ಡಿ ಶಿಕ್ಷಕರು ಸೇಡಂ ವಿದ್ಯಾನಗರ ಸೇಡಂ. **9449064981**. ಸದರಿ ದೂರುದಾರರು ನನ್ನ ಮೇಲೆ ದೂರು ದಾಖಲಿಸಿ ನನ್ನನ್ನು ಟ್ರಾಪ್ ಮಾಡಿಸಿದ್ದು, ಉದ್ದೇಶ ಪೂರ್ವಕವಾಗಿ ಮಾಡಿರುತ್ತಾರೆ. ಆದರೆ ಸದರಿಯವರ ಈ ಕಛೇರಿಯಲ್ಲಿ ಅವರ ಎಲ್ಲಾ ಕೆಲಸಗಳು ವಿಳಂಬವಿಲ್ಲದೆ ಮಾಡಿ ಕೊಟ್ಟಿರುತ್ತೇನೆ. ಖಜಾನೆ-2 ನೊಂದಣಿ ಕಾರ್ಯ ನಾನು (3) ದಿವಸ ರಜೆ ಮೇಲೆ ಇರುವುದರಿಂದ ವಿಳಂಬವಾಗಿರುತ್ತದೆ. ಇದರಲ್ಲಿ ಯಾವುದೇ ಉದ್ದೇಶ ಇರುವುದಿಲ್ಲ" ಎಂದು ಹೇಳಿರುತ್ತಾರೆ. ಸದರಿ ಹೇಳಿಕೆಯನ್ನು ತನಿಖಾಧಿಕಾರಿಯು ದೂರುದಾರರಿಗೆ ಹಾಗೂ ಪಂಚ-2 ಇವರಿಗೆ ತಿಳಿಸಿದಾಗ, ಸದರಿ ಹೇಳಿಕೆಯನ್ನು ಅವರು ಅಲ್ಲಗಳೆದಿರುತ್ತಾರೆ. ತನಿಖಾಧಿಕಾರಿಯು ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ ಹಾಗೂ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿಯು ಪಂಚರ ಸಮಕ್ಷಮ ದಿ: 02/6/2018 ರಂದು ಸಂಜೆ 4.50 ಪಿಎಂ ನಿಂದ 8.30 ಪಿಎಂ ವರೆಗೆ ಪಂಚರ ಸಮಕ್ಷಮ ಹಣ ಜಪ್ತಿ ಪಂಚನಾಮೆಯನ್ನು ಮಾಡಿರುತ್ತಾರೆ.

iv). ಶ್ರೀ ಮಲ್ಲಿಕಾರ್ಜುನ, ಸಹಾಯಕ ಖಜಾನೆ ಅಧಿಕಾರಿ, ಪತ್ರಾಂಕಿತ ಉಪಖಜಾನೆ, ಸೇಡಂ, ಇವರು ಎದುರುದಾರರು, ದೂರುದಾರರಿಂದ ಲಂಚದ ಹಣ ಬೇಡಿಕೆ ಇಟ್ಟ ಸಂಭಾಷಣೆ ಒಳಗೊಂಡ ಸಿ.ಡಿ.ಯ ಮೂಲಕ ಕೇಳಿ, ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ದೂರುದಾರರ ಮತ್ತು ಎದುರುದಾರರ ನಡುವೆ ಲಂಚದ ಹಣಕ್ಕೆ ಸಂಬಂಧಿಸಿದಂತೆ, ಸಂಭಾಷಣೆಯ ಧ್ವನಿಗಳು ಮತ್ತು ಸಂಗ್ರಹಿಸಿದ ಮಾದರಿ ಧ್ವನಿಗೆ ಹೋಲಿಕೆ ಇರುವುದಾಗಿ, ವಿಧಿ-ವಿಜ್ಞಾನ ಪ್ರಯೋಗಾಲಯ ವರದಿಯಿಂದ ಧೃಢಪಟ್ಟಿರುತ್ತದೆ.

v). ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ದೃಡಪಟ್ಟಿದೆ.

vi). ಎದುರುದಾರರಿಗೆ ದಿ: 22-07-2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಅಥವಾ ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ದಿ: 21-08-2021 ರಂದು ತನ್ನ ಲಿಖಿತ ಸಮಜಾಯಿಷಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಅದರಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಸಿಆ.ಸು.ಇ-12,ಸೇ.ಇ.ವಿ.2003 ದಿ: 11-09-2003 ಮೇರೆಗೆ, ಎದುರುದಾರರ ದುರ್ನಡತೆಗೆ/ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯು ಕೃತ್ಯದ ದಿನದಿಂದ 09 ತಿಂಗಳೊಳಗೆ ಮುಗಿಸಬೇಕೆಂದು ಆದೇಶವಿರುತ್ತದೆ. ಹಾಗಾಗಿ ತುಂಬ ತಡವಾಗಿರುತ್ತದೆ. ಮುಂದುವರೆದು, ಎದುರುದಾರರು ಸೇಡಂ-ಉಪ ಖಜಾನೆಯಲ್ಲಿ ಕೆಲಸ ನಿರ್ವಹಿಸುವಾಗ ತನಗೆ ವಹಿಸಲಾದ ಬಿಲ್ಲುಗಳನ್ನು ಪರಿಶೀಲಿಸಿ, ತಾನು ಅವುಗಳನ್ನು ಉಪ-ಖಜಾನೆಗೆ ಕಳುಹಿಸಿರುತ್ತಾರೆ ಎಂದು ದಾಖಲೆಗಳಿಂದ ಕಂಡುಬರುತ್ತದೆ. ದೂರುದಾರರು ಹಾಜರುಪಡಿಸಿದ ಬಿಲ್ಲುಗಳನ್ನು ಪರಿಶೀಲಿಸಿ ಉಪಖಜಾನೆಗೆ ಶಿಫಾರಸ್ಸು ಮಾಡಿರುತ್ತಾರೆ. ನಂತರ,

ಉಪಖಜಾನೆಯ ಅಧಿಕಾರಿ ಸದರಿ ಬಿಲ್ಲುಗಳನ್ನು ಕುರಿತಂತೆ ಚೆಕ್ ನೀಡಲು ಎಸ್.ಡಿ.ಎ. ಅಮರೇಶ್‌ರವರಿಗೆ ನಿರ್ದೇಶಿಸಿರುತ್ತಾರೆ ಎಂದು ತಿಳಿಸಿರುತ್ತಾರೆ ಹಾಗೂ ಎದುರುದಾರರು ದೂರುದಾರರ ಬಿಲ್ಲನ್ನು ಪಾಸ್ ಮಾಡಲು 40,000/- ರೂ.ಗಳ ಅಕ್ರಮ ಸಂಭಾವನೆ ಕೇಳಿರುವುದಿಲ್ಲ ಹಾಗೂ ಬಿಲ್ಲು ಪಾಸ್ ಮಾಡಲು 28,000/- ರೂ.ಹಣವನ್ನು ಪಡೆದಿರುವುದಿಲ್ಲ. ಅಲ್ಲದೆ, ಎದುರುದಾರರು ದೂರುದಾರರ ಬಿಲ್ಲನ್ನು ಪಾಸು ಮಾಡುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ದೂರುದಾರರ ಬಿಲ್ಲುಗಳನ್ನು ಕೆ-2 ಉಪಖಜಾನೆಯಲ್ಲಿ ದಾಖಲಿಸಲು ಬಿಲ್ಲುಗಳನ್ನು ಪಡೆದಿರುವುದಿಲ್ಲ. ಹಾಗಾಗಿ 12,000/- ರೂ. ಅಕ್ರಮ ಸಂಭಾವನೆ ಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ ಹಾಗೂ ಎದುರುದಾರರು ದೂರುದಾರರಿಂದ ದಿ: 15/05/2018 ರಂದು ಲಂಚದ ಹಣದ ಬಾಕಿ 12,000/- ಕೊಡುವಂತೆ ಕೇಳಿರುವುದಿಲ್ಲ ಹಾಗೂ ಎದುರುದಾರರು 11,000/- ರೂ. ಲಂಚದ ಹಣವನ್ನು ಪೇಪರ್ ಹಾಳೆಯ ಮೇಲೆ ಬರೆದು ಆ ಮೂಲಕ ಕೇಳಿರುವುದಿಲ್ಲ. ಅಲ್ಲದೆ ಎದುರುದಾರರು ಮೇ 2018ರ ದಿನಾಂಕ: 29,30, 31 ದಿನಗಳಲ್ಲಿ ರಜೆ ಇರುತ್ತಾರೆ. ದಿ: 2/6/2018 ರಂದು ತನ್ನ ಕಚೇರಿ ಕರ್ತವ್ಯದಲ್ಲಿ ಮಗ್ನರಾಗಿದಾಗ, ದೂರುದಾರರು ವ್ಯಕ್ತಿಯ ಜೊತೆ ಬಂದು ಎದುರುದಾರರಿಗೆ ಕೆಲವು ಪೇಪರ್‌ಗಳನ್ನು ಕೊಟ್ಟು, ಅವುಗಳನ್ನು ಕೆ-2 ಉಪಖಜಾನೆಯಲ್ಲಿ ನೊಂದಾಯಿಸಲು ಕೋರಿಕೊಂಡಿರುತ್ತಾರೆ. ಆಗ ಎದುರುದಾರರು ತಾನು ಈ ಹಿಂದೆ ರಜೆಯಲ್ಲಿದ್ದುದರಿಂದ, ಸದರಿ ಪೇಪರ್‌ಗಳು ಸೂಪರಿಟೆಂಡೆಂಟ್‌ರವರ ಮೂಲಕ ಬಂದಿದರೆ, ಅಟೆಂಡ್ ಮಾಡಬಹುದಾಗಿತ್ತು ಎಂದು ಹೇಳುವ ವೇಳೆಯಲ್ಲಿ, ದೂರುದಾರರು ಲಂಚದ ಹಣವನ್ನು ಎದುರುದಾರರ ಟೇಬಲ್ ಡ್ರಾನಲ್ಲಿ ಇಟ್ಟಿರುತ್ತಾರೆ. ತಕ್ಷಣ ಎಸಿಬಿ ಪೊಲೀಸರು ಬಂದು ವಿಚಾರಣೆ ಕೈಗೊಂಡಿರುತ್ತಾರೆ. ಎದುರುದಾರರು ತಾನು ಕರ್ತವ್ಯ ನಿರ್ವಹಿಸುವ ವೇಳೆಯಲ್ಲಿ ಯಾವುದೆ ಅಕ್ರಮ ಸಂಭಾವನೆಯನ್ನು ದೂರುದಾರರಿಂದ ಕೇಳಿಲ್ಲ/ಪಡೆದಿರುವುದಿಲ್ಲ ಇತ್ಯಾದಿ ಹೇಳಿರುತ್ತಾರೆ. ನಂತರ, ಎಸಿಬಿ ಪೊಲೀಸರು ತನ್ನ ಕೈಗಳನ್ನು ತೊಳೆದು ಅವರೇ ಹೇಳಿದಂತೆ ಸ್ವ-ರಕ್ಷಣಾ ಹೇಳಿಕೆಯನ್ನು ಬರೆದು ನನ್ನ ಸಹಿಯನ್ನು ಪಡೆದಿರುತ್ತಾರೆ. ಆನಂತರ, ಎಸಿಬಿ ಪೊಲೀಸರು ಏನು ಮಾಡಿದರು ಅಂತಾ ಗೊತ್ತಿಲ್ಲ ಇತ್ಯಾದಿ ಹೇಳಿರುತ್ತಾರೆ. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ನೀಡಿರುವ ಸಮಜಾಯಿಷಿಕೆಯನ್ನು ಪರಿಶೀಲಿಸಿದಾಗ ಹಾಗೂ ಎದುರುದಾರರು ಟ್ರಾಪ್ ವೇಳೆಯಲ್ಲಿ ತನಿಖಾಧಿಕಾರಿಯ ಮುಂದೆ ನೀಡಿದ ಸಮಜಾಯಿಷಿಗಳು ಪರಸ್ಪರ ಹೋಲಿಕೆ ಇರುವುದಿಲ್ಲ. ಅಲ್ಲದೆ, ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆಗಳು ಹಾಗೂ ಇತರೆ ಅಂಶಗಳು ಎದುರುದಾರರುಗಳ ದುರ್ನಡತೆಯನ್ನು ಮೇಲ್ನೋಟಕ್ಕೆ ತೋರಿಸುತ್ತದೆ.

3. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

4. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

5. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[signature] 28/1/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)

ಉಪಲೋಕಾಯುಕ್ತರು-1

ಕರ್ನಾಟಕ ರಾಜ್ಯ, ಬೆಂಗಳೂರು